ಕರ್ನಾಟಕ ಸರ್ಕಾರ

KSDH

ತೋಟಗಾರಿಕೆ ಇಲಾಖೆ,
ಬೆಂಗಳೂರು

ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಸಂಜೀವಿನಿ-ಕೆಎಸ್ಆರ್‌ಎಲ್‌ಪಿಎಸ್
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಆರ್‌ಡಿಸಿ-ಇಜಿಎಸ್/219/2022 ದಿನಾಂಕ: 16-11-2022

## ಜಂಟಿ ಸುತ್ತೋಲೆ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ ಚಟುವಟಿಕೆಗಳಲ್ಲಿ ಭೌಗೋಳಿಕ ಸೂಚ್ಯಂಕ ಬೆಳೆಗಳ (GI Crops) ಪ್ರದೇಶಾಭಿವೃದ್ಧಿ ಕೈಗೊಳ್ಳುವ ಕುರಿತು.

***********

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನ ಇಲಾಖೆಯಾದ ತೋಟಗಾರಿಕೆ ಇಲಾಖೆಯಿಂದ ವಿವಿಧ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸುತ್ತಿದ್ದು ಗ್ರಾಮೀಣ ಭಾಗದ ರೈತರಿಗೆ ಜೀವನೋಪಾಯ ಚಟುವಟಿಕೆಗಳನ್ನು ಒದಗಿಸುವ ಮೂಲಕ ಆರ್ಥಿಕ ಸಬಲತೆಯನ್ನು ಕಲ್ಪಿಸಲಾಗುತ್ತಿದೆ. ಇದರ ಮುಂದುವರೆದ ಭಾಗವಾಗಿ ರಾಜ್ಯದಲ್ಲಿ ಭೌಗೋಳಿಕ ಸೂಚ್ಯಂಕವನ್ನು ಪಡೆದಿರುವ ವಿವಿಧ ಬೆಳೆಗಳನ್ನು ಅಭಿವೃದ್ಧಿಗೊಳಿಸಲು ತೀರ್ಮಾನಿಸಲಾಗಿದೆ.

ಭೌಗೋಳಿಕ ಸೂಚ್ಯಂಕ (GI) ಎನ್ನುವುದು ನಿರ್ದಿಷ್ಟ ಭೌಗೋಳಿಕ ಮೂಲ ಮತ್ತು ಗುಣಗಳನ್ನು ಹೊಂದಿರುವ ಉತ್ಪನ್ನಗಳ ಮೇಲೆ ಬಳಸುವ ಸಂಕೇತವಾಗಿದೆ. ಭೌಗೋಳಿಕ ಸೂಚ್ಯಂಕ ಪಡೆದಿರುವ ಬೆಳೆಗಳು ಒಂದು ನಿಗದಿತ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾಗಿದ್ದು, ಅದರದೇ ಆದ ಮಹತ್ವ ಮತ್ತು ವೈಶಿಷ್ಟ್ಯತೆಯನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 12 ತೋಟಗಾರಿಕೆ ಬೆಳೆಗಳಿಗೆ ಭೌಗೋಳಿಕ ಸೂಚ್ಯಂಕ ಪಡೆದಿದ್ದು, ಇವುಗಳಲ್ಲಿ 10 ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಾದ **ದೇವನಹಳ್ಳಿ ಚಕ್ಕೋತ, ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ, ಮೈಸೂರು ವೀಳ್ಯೆದೆಲೆ, ಸಾಗರ ಅಪ್ಪೆಮಿಡಿ, ಕಮಲಾಪುರ ಕೆಂಪು ಬಾಳೆ, ಉಡುಪಿ ಮಲ್ಲಿಗೆ, ಹಡಗಲಿ ಮಲ್ಲಿಗೆ, ಬೆಂಗಳೂರು ನೀಲಿ ದ್ರಾಕ್ಷಿ ಮತ್ತು ಕೊಡಗಿನ ಕಿತ್ತಳೆ** ಒಳಗೊಂಡಿರುತ್ತದೆ **(ಅನುಬಂಧ-1).** ಮೇಲ್ಕಂಡ ಭೌಗೋಳಿಕ ಸೂಚ್ಯಂಕ ಪಡೆದಿರುವ ತೋಟಗಾರಿಕೆ ಬೆಳೆಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ವಿಸ್ತರಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

ಪ್ರಸ್ತುತ ಕೆಲವೊಂದು ಭೌಗೋಳಿಕ ಸೂಚ್ಯಂಕ ಬೆಳೆಗಳು ಅವನತಿ ಅಂಚಿನಲ್ಲಿದ್ದು, ಅವುಗಳನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸಿ ಹಾಗೂ ಪ್ರದೇಶ ವಿಸ್ತರಣೆ ಮಾಡಿ ಆ ಬೆಳೆಗಳ ಉತ್ಪನ್ನಕ್ಕೆ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಕಲ್ಪಿಸುವುದರ ಮೂಲಕ ಅಭಿವೃದ್ಧಿಪಡಿಸಬಹುದಾಗಿದೆ. ಸದರಿ ಬೆಳೆಗಳ ವಿಸ್ತರಣೆಗಾಗಿ "ಬೆಳೆಗಾರರ ಉತ್ಪಾದನಾ ಸಂಘ(FPO) ರಚಿಸಿ, ಅವುಗಳ ಮಾಲಿಕತ್ವದ ಜವಾಬ್ದಾರಿಯನ್ನು ಬೆಳೆಗಾರರ ಸಂಘಗಳಿಗೆ ನೀಡುವುದು ಮುಖ್ಯವಾಗಿದೆ". ಈ ನಿಟ್ಟಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ **ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆಯ (NRLM) ಜಂಟಿ ಸಹಯೋಗದೊಂದಿಗೆ** ಪ್ರಸ್ತುತ ವರ್ಷ Vision Oriented/Mission Oriented Mode ನಲ್ಲಿ ಕಾರ್ಯಕ್ರಮ ರೂಪಿಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ.

1. <u>ಫಲಾನುಭವಿಗಳ ಆಯ್ಕೆ:</u>

ನರೇಗಾ ಯೋಜನೆಯಡಿ ಈ ಕೆಳಕಂಡ ಪ್ರವರ್ಗಗಳಿಗೆ ಸೇರಿದ ಕುಟುಂಬಗಳ/ಫಲಾನುಭವಿಗಳು ವೈಯಕ್ತಿಕ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

- ಪರಿಶಿಷ್ಟ ಜಾತಿ
- ಪರಿಶಿಷ್ಟ ಪಂಗಡ
- ಅಲೆಮಾರಿ ಜನಗಳು
- ಪ್ರಕಟಣೆಯಿಂದ ತೆಗೆದು ಹಾಕಿದ ಬುಡಕಟ್ಟು ಜನಾಂಗದವರು.
- ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಇತರೆ ಕುಟುಂಬಗಳು
- ಸ್ತ್ರೀ ಪ್ರಧಾನ ಕುಟುಂಬಗಳು
- ವಿಕಲಚೇತನ ಪ್ರಧಾನ ಕುಟುಂಬಗಳು
- ಭೂ ಸುಧಾರಣಾ ಫಲಾನುಭವಿಗಳು.
- ಪ್ರಧಾನ ಮಂತ್ರಿ ಆವಾಜ್ ಯೋಜನೆಯ ಫಲಾನುಭವಿಗಳು.

ಅನುಸೂಚಿತ ಬುಡಕಟ್ಟುಗಳ ಇತರ ಪರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 (2007 ರ 2) ಮತ್ತು ಮೇಲಿನ ಪ್ರವರ್ಗಗಳಡಿ ಅರ್ಹ ಫಲಾನುಭವಿಗಳು ಪೂರ್ಣವಾದ ನಂತರ ಕೃಷಿ ಋಣ ಮನ್ನ ಮತ್ತು ಋಣ ಪರಿಹಾರ ಯೋಜನೆ, 2008 ರಲ್ಲಿ ವಿವರಿಸಿದಂತೆ ಹಾಗೂ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಠ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಅಥವಾ ತೋಟದಲ್ಲಿ ಕೈಗೊಳ್ಳುವ ಕಾಮಗಾರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ ಷರತ್ತಿಗೆ ಒಳಪಟ್ಟಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಲ್ಲಿ ಕೈಗೊಳ್ಳುವ ಕಾಮಗಾರಿಗಳು. 2021-22 ನೇ ಸಾಲಿನ ವಾರ್ಷಿಕ ಪ್ರಧಾನ ಸುತ್ತೋಲೆಯ ಕಂಡಿಕೆ 7.4.12 ಗೆ ಪೂರಕವಾಗಿ ಪತ್ರ ಸಂಖ್ಯೆ: RDC-EGS/149/2021, ದಿನಾಂಕ: 02-08-2021 ರಲ್ಲಿ ತಿಳಿಸಿದಂತೆ ವೈಯಕ್ತಿಕ ಕಾಮಗಾರಿಗಳಿಗೆ ಒದಗಿಸುವ ಒಟ್ಟು ಸಹಾಯದ ಮೊತ್ತವನ್ನು ರೂ. 2.50 ಲಕ್ಷಗಳಿಗೆ ನರೇಗಾದಲ್ಲಿ ಮಿತಿಯೊಳಗಿರುವುದನ್ನು ಖಾತ್ರಿ ಪಡಿಸಿಕೊಂಡು ಅನುಷ್ಠಾನಗೊಳಿಸುವುದು

2. <u>ಅನುಷ್ಠಾನ ಕ್ರಮಗಳು ಮತ್ತು ಅನುಷ್ಠಾನ ಇಲಾಖೆಗಳ ಜವಾಬ್ದಾರಿಗಳು :</u>

ಸಾಂಪ್ರದಾಯಿಕವಾಗಿ ಈ ಬೆಳೆಗಳನ್ನು ಬೆಳೆಯುತ್ತಿರುವ ಅಧಿಸೂಚಿತ ಪ್ರದೇಶದಲ್ಲಿರುವ ಗ್ರಾಮ ಪಂಚಾಯತಿಯನ್ನು ಗುರುತಿಸಿ ನರೇಗಾ, ತೋಟಗಾರಿಕೆ ಇಲಾಖೆ ಹಾಗೂ ಎನ್‌ಆರ್‌ಎಲ್‌ಎಂ ಸಹಯೋಗದೊಂದಿಗೆ ಕ್ಲಸ್ಟರ್ ರೂಪದಲ್ಲಿ ಕನಿಷ್ಠ 20-25 ಎಕರೆ ಪ್ರದೇಶ ವಿಸ್ತರಣೆ ಮಾಡಲು ಕ್ರಮವಹಿಸುವುದು **(ಅನುಬಂಧ-2).** ಭೌಗೋಳಿಕ ಸೂಚ್ಯಂಕ ಪಡೆದ ಬೆಳೆಗಳ ಅಭಿವೃದ್ಧಿಯನ್ನು ಮೇಲೆ ವಿವರಿಸಿದಂತೆ 03 ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಇಲಾಖೆ, ತೋಟಗಾರಿಕೆ ಹಾಗೂ ಎನ್‌ಆರ್‌ಎಲ್‌ಎಂ (NRLM) ಜಂಟಿಯಾಗಿ ಒಗ್ಗೂಡಿಸುವಿಕೆಯಡಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ಭೌಗೋಳಿಕ ಸೂಚ್ಯಂಕ ಬೆಳೆಗಳ ಅಧಿಸೂಚಿತ ನಿರ್ದಿಷ್ಟ ಪ್ರದೇಶ ವ್ಯಾಪ್ತಿಯಲ್ಲಿ ರೈತ ಉತ್ಪಾದನೆ ಕಂಪನಿಗಳನ್ನು ಸಂಘಟಿಸಿ ಸದರಿ ಬೆಳೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು.

ಈ ನಿಟ್ಟಿನಲ್ಲಿ ಪ್ರತಿ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

a. <u>ಗ್ರಾಮೀಣಾಭಿವೃದ್ಧಿ ಇಲಾಖೆ:</u>

- ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಮತಿಸಿದ ಚಟುವಟಿಕೆಗಳಂತೆ ಸದರಿ ಬಹುವಾರ್ಷಿಕ ಬೆಳೆಗಳ ಪ್ರದೇಶಾಭಿವೃದ್ಧಿಗೆ (Backward linkage) ಅನುದಾನದ ಅವಕಾಶ ಕಲ್ಪಿಸುವುದು.

- ಬೆಳೆಗಳ ಉತ್ಪನ್ನಗಳ ಮಾರಾಟಕ್ಕೆ ಅವಶ್ಯಕ ಗ್ರಾಮೀಣ ಮಾರುಕಟ್ಟೆ ವ್ಯವಸ್ಥೆಯ ಮೂಲಭೂತ ಸೌಲಭ್ಯಗಳನ್ನು ನರೇಗಾ ಯೋಜನೆಯಡಿ ಸೃಜಿಸುವುದು.
- ಸದರಿ ಬೆಳೆಗಳ ಅಭಿವೃದ್ಧಿಗೆ ಪೂರಕವಾಗಿ ಸೂಕ್ತ ತಾಂತ್ರಿಕ ತರಬೇತಿಯನ್ನು ತಾಂತ್ರಿಕ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಲು ಸಹಕಾರಿಸುವುದು.
- ಸದರಿ ಮಹತ್ವಕಾಂಕ್ಷೆ ಕಾರ್ಯಕ್ರಮದ ಅನುಷ್ಠಾನಕ್ಕೆ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯನಿರ್ವಹಿಸುವುದು.
- ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದಲ್ಲಿ ಜಂಟಿ ನೋಡಲ್ ಅಧಿಕಾರಿಯಾಗಿ ತೋಟಗಾರಿಕೆ ಉಪ ನಿರ್ದೇಶಕರೊಂದಿಗೆ ಕಾರ್ಯನಿರ್ವಹಿಸುವುದು .

b. <u>ತೋಟಗಾರಿಕೆ ಇಲಾಖೆ</u>

- ನರೇಗಾ ಯೋಜನೆಯಡಿ ಸದರಿ ಬೆಳೆಗಳ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಇಲಾಖೆಯಾಗಿ ಕಾರ್ಯನಿರ್ವಹಿಸುವುದು.
- ಭೌಗೋಳಿಕ ಸೂಚ್ಯಂಕದ ಬೆಳೆಗಳ ನಿರ್ದಿಷ್ಟ ಪ್ರದೇಶಗಳ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ನಿಯಮಾನುಸಾರ ಕ್ರಿಯಾಯೋಜನೆಯನ್ನು ರೂಪಿಸಿ, ಅನುಮೋದಿಸಿಕೊಂಡು ಗ್ರಾಮ ಪಂಚಾಯತಿ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
- ಭೌಗೋಳಿಕ ಸೂಚ್ಯಂಕದ ಬೆಳೆಗಳ ಪ್ರದೇಶಾಭಿವೃದ್ಧಿಗೆ ಬೇಕಾಗುವ ನಿರ್ದಿಷ್ಟ ಗುಣಮಟ್ಟದ ಮತ್ತು ಮೂಲ ಗುಣ ಹೊಂದಿರುವ ಕಸಿಸಸಿಗಳ ಬೇಡಿಕೆಯನ್ನು ನಿರ್ಧರಿಸಿ ಅವುಗಳ ಉತ್ಪಾದನೆ ಮತ್ತು ಸರಬರಾಜು ಮಾಡಲು ಜಿಲ್ಲಾ ಮಟ್ಟದಲ್ಲಿ Production and Supply chain Plan ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು.
- ಸದರಿ ಭೌಗೋಳಿಕ ಸೂಚ್ಯಂಕದ ಬೆಳೆಗಳ ಅಭಿವೃದ್ಧಿ ಸಾಂಸ್ಥಿಕ ರೂಪ ನೀಡಲು (Institutional Structure) ನೀಡಲು ರೈತ ಉತ್ಪಾದಕ ಕಂಪನಿ ಸ್ಥಾಪಿಸುವುದು **(ಅನುಬಂಧ-3)**.
- ಜಿಲ್ಲಾ ಮಟ್ಟದಲ್ಲಿ ತೋಟಗಾರಿಕೆ ಉಪ ನಿರ್ದೇಶಕರನ್ನು ಸದರಿ ಕಾರ್ಯಕ್ರಮ ಅನುಷ್ಠಾನದ ಜಂಟಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳೊಂದಿಗೆ ಕಾರ್ಯನಿರ್ವಹಿಸುವುದು.

c. <u>ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆ</u>

- ಭೌಗೋಳಿಕ ಸೂಚ್ಯಂಕದ ಬೆಳೆಗಳ ನಿರ್ದಿಷ್ಟ ಪ್ರದೇಶಗಳ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಸದರಿ ಬೆಳೆಗಳ ಅಭಿವೃದ್ಧಿ ಮಹತ್ವದ ಕುರಿತು ಪ್ರಚಾರ ಕಾರ್ಯಕ್ರದಲ್ಲಿ ಸಹಕರಿಸುವುದು.
- ಸದರಿ ಬೆಳೆಗಳ ರೈತ ಉತ್ಪಾದಕ ಕಂಪನಿಗಳಿಗೆ ಸಾಂಸ್ಥಿಕ ಮಾರುಕಟ್ಟೆಗೆ ಪೂರಕ ಮೂಲಭೂತ ಸೌಲಭ್ಯಗಳ ಸೃಷ್ಟಿಗೆ ಅಗತ್ಯ ಆರ್ಥಿಕ ಸಹಾಯಧನ ಒದಗಿಸುವುದು.
- ಸದರಿ ಬೆಳೆಗಳ ಉತ್ಪನ್ನಗಳ Forward linkage ಗೆ ಪೂರಕವಾಗಿ ಮೌಲ್ಯವರ್ಧನೆ (Value addition) ಮತ್ತು ಮಾರುಕಟ್ಟೆ (Marketing) ಕುರಿತು ಕೌಶಲ್ಯ ತರಬೇತಿ ನೀಡುವುದು.
- ಸದರಿ ಬೆಳೆಗಳ ಉತ್ಪನ್ನಗಳ ಮಾರಾಟಕ್ಕೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ digital Marketing ವೇದಿಕೆ ಸೃಜಿಸುವುದು.
- ಯೋಜನೆಯ ಅನುಷ್ಠಾನದಲ್ಲಿ ಇತರೆ ಇಲಾಖೆಗಳು ಜರುಗಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಸ್ವಸಹಾಯ ಸಂಘಗಳು ಪಾಲ್ಗೊಳ್ಳಲು ಅಗತ್ಯ ನಿರ್ದೇಶನಗಳನ್ನು ನೀಡುವುದು.

3. <u>ಅನುದಾನ:</u>

ಈ ಕಾರ್ಯಕ್ರಮದ ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ನರೇಗಾ ಅನುದಾನದಡಿ ಅನುಮೋದಿತ ಅಂದಾಜು ಪಟ್ಟಿಯಂತೆ ಅನುಷ್ಠಾನ ಇಲಾಖೆಯು ಅನುಷ್ಠಾನಗೊಳಿಸುವುದು. ಒಗ್ಗೂಡಿಸುವಿಕೆ ಚಟುವಟಿಕೆಗಳಾದ ತರಬೇತಿ ಕೌಶಲ್ಯಾಭಿವೃದ್ಧಿ, ಮೌಲ್ಯವರ್ಧನೆ, ಮಾರುಕಟ್ಟೆ ಸರಪಳಿ ಅಭಿವೃದ್ಧಿ ಇತ್ಯಾದಿ ಚಟುವಟಿಕೆಗಳನ್ನು ತೋಟಗಾರಿಕೆ ಇಲಾಖೆ ಮತ್ತು ಎನ್.ಆರ್.ಎಲ್.ಎಮ್. ಇಲಾಖೆಗಳು ಆಯಾ ಇಲಾಖೆ ಯೋಜನಾ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸುವುದು.

4. <u>ದಾಖಲೀಕರಣ:</u>

ಸದರಿ ಕಾರ್ಯಕ್ರಮಗಳ ಅನುಷ್ಠಾನ ಪೂರ್ವದಲ್ಲಿಯ ವಾಸ್ತವ ಸ್ಥಿತಿ ಹಾಗೂ ಅನುಷ್ಠಾನ ಹಂತದ ಚಟುವಟಿಕೆಗಳ ಪ್ರಗತಿ, ಮೌಲ್ಯವರ್ದಿತ ಚಟುವಟಿಕೆಗಳು ಹಾಗೂ ಮಾರುಕಟ್ಟೆಯ ಸರಪಳಿ ಅಭಿವೃದ್ಧಿ ಇತ್ಯಾದಿಗಳ ದಾಖಲೀಕರಣವನ್ನು ಮಾಡುವುದು. ಇದಕ್ಕೆ ತಗಲುವ ವೆಚ್ಚಗಳನ್ನು ನರೇಗಾ ಯೋಜನೆಯ IEC ಚಟುವಟಿಕೆಗಳಡಿ ಭರಿಸುವುದು.

5. <u>ಮೇಲ್ವಿಚಾರಣೆ ಮತ್ತು ಪ್ರಗತಿ ಪರಿಶೀಲನೆ:</u>

ಭೌಗೋಳಿಕ ಸೂಚ್ಯಂಕದ ಬೆಳೆಗಳ ಸದರಿ ಮಹಾತ್ವಾಕಾಂಕ್ಷೆ ಕಾರ್ಯಕ್ರಮದ ಕಾಲಮಿತಿ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ನಿಗಧಿತವಾಗಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಜರುಗಿಸಿ ವರದಿ ಸಲ್ಲಿಸುವುದು **(ಅನುಬಂಧ-4)** ಹಾಗೂ ರಾಜ್ಯ ಮಟ್ಟದಲ್ಲಿ ಪ್ರತಿ ತಿಂಗಳು 4ನೇ ಶುಕ್ರವಾರ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತದೆ.

6. <u>ಅನುಷ್ಠಾನದ ಕಾಲಮಿತಿ:</u>

| ಕ್ರ.ಸಂ | ಚಟುವಟಿಕೆಗಳು | ಅವಧಿ | ಇಲಾಖೆಗಳು | ಸಮನ್ವಯ ಅಧಿಕಾರಿ | ನೋಡಲ್ ಅಧಿಕಾರಿಗಳು |
|---|---|---|---|---|---|
| 1 | ಭೌಗೋಳಿಕ ಸೂಚ್ಯಂಕದ ಬೆಳೆಗಳ ನಿರ್ದಿಷ್ಟ ಪ್ರದೇಶಗಳ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಫಲಾನುಭವಿಗಳ ಆಯ್ಕೆ | Dec- 2022 | ಎನ್‌ಆರ್‌ಎಲ್, ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | ಕಾರ್ಯನಿರ್ವಾಹ ಅಧಿಕಾರಿಗಳು ತಾ.ಪಂ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು DPMU | ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳು ಮತ್ತು ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರುಗಳು |
| 2 | ಗ್ರಾಮ ಪಂಚಾಯತಿ ಕ್ರಿಯಾಯೋಜನೆ ಅಳವಡಿಸಿ ಅನುಮೋದಿಸಿಕೊಳ್ಳುವುದು. | Dec -2022 | ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | | |
| 3 | ಪ್ರಚಾರ ಮತ್ತು ತರಬೇತಿ | Dec - 2022 | ಎನ್‌ಆರ್‌ಎಲ್‌ಎಮ್, ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | | |
| 4 | ಪ್ರದೇಶಾಭಿವೃದ್ಧಿ ಅನುಷ್ಠಾನ | Dec -2022 - March-2023 | ತೋಟಗಾರಿಕೆ ಇಲಾಖೆ | | |
| 5 | ರೈತ ಉತ್ಪಾದಕ ಕಂಪನಿಯ ಸದಸ್ಯರುಗಳಿಗೆ ವೈಯಕ್ತಿಕ ಮತ್ತು ಗುಂಪುಗಳ ಮೌಲ್ಯವರ್ಧಿತ ಚಟುವಟಿಕೆಗಳಿಗೆ ಆರ್ಥಿಕ ಉತ್ತೇಜನ | Dec- 2022- March 2023 | ಎನ್‌ಆರ್‌ಎಲ್‌ಎಮ್ ಮತ್ತು ತೋಟಗಾರಿಕೆ ಇಲಾಖೆ | | |

| | | | | | |
|---|---|---|---|---|---|
| 6 | ಮೌಲ್ಯವರ್ಧನೆ ತರಬೇತಿ ಮತ್ತು ಮಾರುಕಟ್ಟೆ ವೇದಿಕೆ ಸೃಷ್ಟಿ | Jan-Feb 2023 | ಎಸ್‌ಆರ್‌ಎಲ್‌ಎಮ್ ಮತ್ತು ತೋಟಗಾರಿಕೆ ಇಲಾಖೆ | | |
| 7 | ಸ್ಥಳೀಯ ಗ್ರಾಮೀಣ ಮಾರುಕಟ್ಟೆ ಮೂಲಭೂತ ಸೌಕರ್ಯ ಸೃಷ್ಟಿ | Jan-Feb 2023 | ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | | |

ನಿರ್ದೇಶಕರು,
ತೋಟಗಾರಿಕೆ ಇಲಾಖೆ,
ಲಾಲ್‌ಬಾಗ್, ಬೆಂಗಳೂರು

ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅಭಿಯಾನ ನಿರ್ದೇಶಕರು
ಕೆ-ಎಸ್‌ಆರ್‌ಎಲ್‌ಎಮ್,
ಬೆಂಗಳೂರು.

**<u>ಇವರಿಗೆ,</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ರವರ ಆಪ್ತ ಶಾಖೆಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಆಪ್ತ ಶಾಖೆಗೆ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು

# ಅನುಬಂಧ-1

## ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಭೌಗೋಳಿಕ ಸೂಚ್ಯಂಕ ಪಡೆದಿರುವ ಬಹುವಾರ್ಷಿಕ ತೋಟಗಾರಿಕೆ ಬೆಳಗಳಿಗೆ ಅಧಿಸೂಚಿತ ಪ್ರದೇಶಗಳ ಮಾಹಿತಿ

| Sl.No | Crop Registered | Districts Name | Taluk Name | Village Name |
|---|---|---|---|---|
| 1 | Mysore mallige | Mysore and Mandya | Mysuru and Mandya | Devanoor Kere, Hole Kesaruru, Matti, K.R. Mill, Rajajinagara |
| 2 | Nanjanagudu Rasabale | Mysore and Chamarajanagara | Nanjanagud, Mysuru and Chamarajanagar | Devarasana halli, Sindhuvalli pura, Halalu, Geekalli undi,Kabballi – Mysore Korohalli, Bhujganpura,Chikkakavalande-Chamarajanagara |
| 3 | Devanahalli Pummelo | Bengaluru Rural and Kolar | Bengaluru Rural and Kolar | Melinathotadahalli, Shivanapura, Nandicross, Soopanahalli, Bidalir, Neelaganapalya, Beerasandra, Rajathafarm, Raghunathapura, Vishwanathapura, Kundana, Neelaguntepalya, Chanarayapatna. |
| 4 | Mysore Betel leaf | Mysore | Udburu, Thoreyanagthuru, Maraballi and Kalale | |
| 5 | Appemidi mango | Shivamogga, Uttara Kannada, Udupi, Dakshina Kannda, Chikkamagaluru, Hassan | Shimoga, Uttara Kannada, D.Kannada | Appemidi Mango varieties are particularly grown in Sagar, Ripponpete and Hosanagara taluka of Shimoga District; River valleys of Aghanashini, Kali, Bedthi, Sharavathi and Varada of Uttara Kannada District.<br>River valleys in Udupi and Dakshina Kannada Districts. Malnad region of Chikmagalur District. Sakleshpur region of Hassan District. |
| 6 | Kamalapura Red banana | Kalburgi | Kamalapura Gulberga dist. | It is unique to Kamalapur and surrounding areas such as Rajnal and Navanihal region of Gulbarga District of Karnataka. |
| 7 | Udupi mallige | Udupi | Mangalore, Bhantwala, Belthangadi and Shankarapur | Shankarapura, Belmannu, Modumbe, Panjimar, Undoor, Ennaje, Katpadi |
| 8 | Hadagali mallige | Vijayanagara | Huvinahadagali Bellary dist. Hagaribommanahalli tq. | Huvina Hadagali,Hanakana Halli,Devagondana Halli, Meerakorna Halli, Huguluru, Sogi, Mudenuru, Kaganuru, Hombali, Honna Nayaka Halli, Pura, Navali, Tippapura, Halu Timla Pura, Koylargatti, Hire Hadagali, Holagundi,BaviHalli, Hagarnuru, Holalu, Gujanur, Basapura, Nandi Halli, Kantipura |
| 9 | Bangalore Blue Grapes | Bengaluru Rural | Kolar, Bangalore rural and some parts of Chikkaballapura districts(chikkaballapura & Shidalghatta tq.) | |
| 10 | Coorg mandarin | Kodagu, Hassan, Chikkamagaluru | Madikere, Hassan and Chikkamangaluru | |

## ಅನುಬಂಧ-2

## ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಭೌಗೋಳಿಕ ಸೂಚ್ಯಂಕ ಪಡೆದಿರುವ ಬಹುವಾರ್ಷಿಕ ತೋಟಗಾರಿಕೆ ಬೆಳಗಳ ಪ್ರಸ್ತುತ ಪ್ರದೇಶ ಮತ್ತು ಅಭಿವೃದ್ಧಿಪಡಿಸಲು ನಿಗದಿಪಡಿಸಿದ ಗುರಿ

| Sl.No | GI Crops | Present Area (Ha.) | Target Area/Cluster (Acre) | Spacing | No. of plants per Acre | Total Planting Material Demand (No.) |
|---|---|---|---|---|---|---|
| 1 | Mysore Mallige | 0.2 | 25 | 2.5*2.5 | 640 | 16000 |
| 2 | Nanjanagudu Rasabale | 6 | 25 | 2*2 | 1000 | 50000 |
| 3 | Devanahalli Pomelo | 10 | 25 | 6*6 | 110 | 2800 |
| 4 | Mysore Betel leaf | 20 | 25 | 1.5*1.5 | 1776 | 45000 |
| 5 | Appemidi | 25 | 25 | 5*4 | 200 | 30000 |
| 6 | Kamalapura Red Banana | 30 | 25 | 2*2 | 1000 | 25000 |
| 7 | Udupi Mallige | 116 | 25 | 2.5*2.5 | 640 | 16000 |
| 8 | Hadagali Mallige | 150 | 25 | 2.5*2.5 | 640 | 16000 |
| 9 | Banglore Blue Grapes | 2420 | 25 | 1.8*1.8 | 1234 | 30800 |
| 10 | Coorg mandrin | 3230 | 25 | 6*6 | 110 | 8400 |
| Total | | | | | | 240000 |

## ಅನುಬಂಧ-3

| ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ರೈತ ಉತ್ಪಾದಕ ಕಂಪನಿಗಳ ಸ್ಥಾಪನೆಯ ಪ್ರಗತಿ ವರದಿ | | | | | | | | |
|---|---|---|---|---|---|---|---|---|
| Sl.No | Activities | District | Taluk | FPO Status | No. Members Registered | No. of FIG | FPO Proposal Satus | Time Line For FPO Formation |
| 1 | ರೈತ ಉತ್ಪಾದನೆ ಕಂಪನಿ ಸ್ಥಾಪನೆ | | | | | | | |
| 2 | | | | | | | | |
| 3 | | | | | | | | |
| 4 | | | | | | | | |
| 5 | | | | | | | | |

ತೋಟಗಾರಿಕೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯತಿ.........................

# ಅನುಬಂಧ-4

| ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಭೌಗೋಳಿಕ ಸೂಚ್ಯಂಕ ಪಡೆದಿರುವ ಬಹುವಾರ್ಷಿಕ ತೋಟಗಾರಿಕೆ ಬೆಳಗಳ ಪ್ರದೇಶಾಭಿವೃದ್ಧಿ ಹಾಗೂ ಗ್ರಾಮೀಣ ಮಾರುಕಟ್ಟೆ ಅನುಷ್ಠಾನದ ಪ್ರಗತಿ ವರದಿ | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| Sl.No | Activities | District | Taluk | Crop | No of cluster identified | No of beneficiaries Selected | Whether Included in G. P Approved Action Plan | Present status of planting material available | | | | Target | | Achievement | | |
| | | | | | | | | Department Farm | GPLF Nursery | Farmers | Eol/Private | Physical | Financial | Physical | Financial |
| 1 | AEP | | | | | | | | | | | | | | |
| 2 | Rural hats | | | | | | | | | | | | | | |
| 3 | | | | | | | | | | | | | | | |
| 4 | | | | | | | | | | | | | | | |
| 5 | | | | | | | | | | | | | | | |

ತೋಟಗಾರಿಕೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯತಿ.........................